# 91 ಮನೆಗಳ ಅನಧಿಕೃತ ನೀರು ಸಂಪರ್ಕ ಕಡಿತ

ಬೆಂಗಳೂರು: ಅನಧಿಕೃತವಾಗಿ ನೀರು ಪಡೆಯುತ್ತಿದ್ದ 91 ಮನೆಗಳ ಸಂಪರ್ಕಗಳನ್ನು ಜಲಮಂಡಳಿಯು ಕಡಿತಗೊಳಿಸಿದೆ. ಅಲ್ಲದೆ, ದಂಡವನ್ನೂ ವಿಧಿಸಲಾಗಿದೆ.

ಮಾಪಕದ (ಮೀಟರ್) ನೀರು ಹರಿಯುವಿಕೆಯನ್ನು ತಪ್ಪಿಸಿ, ಅನ್ಯ ಮಾರ್ಗದ ಮೂಲಕ ಸಂಪರ್ಕ ಪಡೆಯಲಾಗಿತ್ತು. ಗ್ರಾಹಕರ ಮಾಸಿಕ ನೀರಿನ ಬೇಡಿಕೆಯನ್ನು ಆಧರಿಸಿ, ಪರಿಶೀಲನೆ ನಡೆಸಿದಾಗ ಬಳಸಿದ ನೀರಿಗೂ, ಮೀಟರ್‌ನಲ್ಲಿ ದಾಖಲಾದ ನೀರಿನ ಪ್ರಮಾಣಕ್ಕೂ ವ್ಯತ್ಯಾಸವಿರುವುದು ಕಂಡು ಬಂದಿತ್ತು ಎಂದು ಜಲಮಂಡಳಿ ಹೇಳಿದೆ.

ಪೂರ್ವ ವಲಯದಲ್ಲಿ 41 ಹಾಗೂ ಪಶ್ಚಿಮ ವಲಯದಲ್ಲಿ 50 ಇಂತಹ ಪ್ರಕರಣಗಳು ಪತ್ತೆಯಾಗಿವೆ. ಮಾಪಕದ ಮೂಲಕ ನೀರು ಹರಿಯುವುದನ್ನು ತಪ್ಪಿಸಿ, ಸಂಪರ್ಕ ಪಡೆಯುವುದು ಕಾನೂನುಬಾಹಿರ. ಗ್ರಾಹಕರು ಈ ಪ್ರಯತ್ನ ಮಾಡಬಾರದು ಎಂದೂ ಮಂಡಳಿ ಎಚ್ಚರಿಸಿದೆ.

# ನೀರಿನ ಸಂಪರ್ಕ ಕಡಿತ

**ಬೆಂಗಳೂರು:** ಗ್ರಾಹಕರು ಮಾಪಕದ ಮೂಲಕ ನೀರು ಹರಿಯುವಿಕೆಯನ್ನು ತಪ್ಪಿಸಿ ಬೈಪಾಸ್ ಮುಖಾಂತರ ಪಡೆದಿರುವ ನೀರಿನ ಸಂಪರ್ಕವನ್ನು ಜಲಮಂಡಳಿಯು ಕಡಿತಗೊಳಿಸಿ ದಂಡ ವಿಧಿಸಿದೆ.

ಜಲಮಂಡಳಿಯ ಅಧಿಕಾರಿಗಳು ನೀರು ಸರಬರಾಜು ವೇಳೆಯಲ್ಲಿ ತಪಾಸಣೆ ನಡೆಸಿ ಪೂರ್ವ ವಲಯದಲ್ಲಿ 41 ಹಾಗೂ ಪಶ್ಚಿಮ ವಲಯದಲ್ಲಿ 50 ಒಟ್ಟು 91 ಸಂಪರ್ಕಗಳನ್ನು ಗುರುತಿಸಿ ಬೈಪಾಸ್ ಮುಖಾಂತರ ಪಡೆದಿರುವ ನೀರಿನ ಸಂಪರ್ಕವನ್ನು ಕಡಿತಗೊಳಿಸಿ ದಂಡ ವಿಧಿಸಿದ್ದಾರೆ. ಗ್ರಾಹಕರು ಮಾಪಕದ ಮೂಲಕ ನೀರು ಹರಿಯುವಿಕೆಯನ್ನು ತಪ್ಪಿಸಿ ಬೈಪಾಸ್ ಮುಖಾಂತರ ನೀರಿನ ಸಂಪರ್ಕವನ್ನು ಪಡೆಯುವುದು ಕಾನೂನು ಬಾಹಿರ. ಆದ್ದರಿಂದ ಗ್ರಾಹಕರು ಇದಕ್ಕೆ ಆಸ್ಪದ ಕೊಡಬಾರದೆಂದು ಮಂಡಳಿಯು ಮನವಿ ಮಾಡಿದೆ.

epaper.vishwavani.news

# ಅಕ್ರಮ ನೀರಿನ ಸಂಪರ್ಕಕ್ಕೆ ದಂಡ

**ಬೆಂಗಳೂರು:** ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನೀರು ಸರಬರಾಜು ವೇಳೆಯಲ್ಲಿ ತಪಾಸಣೆ ನಡೆಸಿದ್ದು, ಮಾಪಕದ ನೀರಿನ ಹರಿವನ್ನು ತಪ್ಪಿಸಿ ಬೈಪಾಸ್ ಮೂಲಕ ಪಡೆದ ಸಂಪರ್ಕಗಳನ್ನು ಪತ್ತೆ ಹಚ್ಚಿ, ಸಂಪರ್ಕ ಕಡಿತಗೊಳಿಸಿ ದಂಡ ವಿಧಿಸಿದೆ. ಮಾಸಿಕ ನೀರಿನ ಬೇಡಿಕೆಯಲ್ಲಿ ವ್ಯತ್ಯಾಸ ಕಂಡುಬಂದಿದ್ದು, ಈ ರೀತಿ ಮಾಪಕದ ಮೂಲಕ ನೀರು ಹರಿಯುವಿಕೆಯನ್ನು ತಪ್ಪಿಸಿ ಪಡೆದಿರುವ ನೀರಿನ ಸಂಪರ್ಕವನ್ನು ಪತ್ತೆಹಚ್ಚಲು ರಚಿಸಿದ ತಂಡವು, ಮಂಡಳಿಯ ಮುಖ್ಯ ಅಭಿಯಂತರರು(ಪೂರ್ವ) ವಲಯದಿಂದ 41 ಹಾಗೂ ಮುಖ್ಯ ಅಭಿಯಂತರರು(ಪಶ್ಚಿಮ) ವಲಯದಿಂದ 50, ಒಟ್ಟು 91 ಸಂಪರ್ಕಗಳನ್ನು ಗುರುತಿಸಿ, ದಂಡ ವಿಧಿಸಿದೆ. ಮಾಪಕದ ಮೂಲಕ ನೀರು ಹರಿಯುವಿಕೆಯನ್ನು ತಪ್ಪಿಸಿ ನೀರಿನ ಸಂಪರ್ಕವನ್ನು ಪಡೆಯುವುದು ಕಾನೂನು ಬಾಹಿರವಾಗಿರುತ್ತದೆ. ಕಾನೂನು ಬಾಹಿರವಾಗಿ ನೀರಿನ ಸಂಪರ್ಕ ಪಡೆದಿರುವ ಗ್ರಾಹಕರ ವಿರುದ್ಧ ಕಾನೂನು ರೀತಿ ಕ್ರಮವಹಿಸಲಾಗುವುದು. ಆದ್ದರಿಂದ ಗ್ರಾಹಕರು ಇದಕ್ಕೆ ಆಸ್ಪದ ಕೊಡಬಾರದೆಂದು ಮಂಡಳಿ ಮನವಿ ಮಾಡಿದೆ.



# 91 ಅನಧಿಕೃತ ನೀರಿನ ಸಂಪರ್ಕ ಕಡಿತ, ದಂಡ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕಾವೇರಿ ನೀರಿನ ಅನಧಿಕೃತ ಸಂಪರ್ಕ ಪಡೆದಿದ್ದ 91 ಸಂಪರ್ಕಗಳನ್ನು ಕಡಿತಗೊಳಿಸಿ ಬೆಂಗಳೂರು ಜಲಮಂಡಳಿ ದಂಡ ವಿಧಿಸಿದೆ. ಕಾವೇರಿ ನೀರಿನ ಅನಧಿಕೃತ ಸಂಪರ್ಕ ಪತ್ತೆಗೆ ಜಲಮಂಡಳಿ ರಚಿಸಿರುವ ತಂಡ ನಗರದ ಪೂರ್ವ ಹಾಗೂ ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ತಪಾಸಣೆ ನಡೆಸಿದ ವೇಳೆ ಒಟ್ಟು 91 ಮಂದಿ ಅನಧಿಕೃತ ನೀರಿನ ಸಂಪರ್ಕ ಪಡೆದಿರುವುದು ಕಂಡು ಬಂದಿದೆ. ಜಲಮಂಡಳಿ ಗಮನಕ್ಕೆ ತರದೇ ಕುಡಿಯುವ ನೀರಿನ ಸಂಪರ್ಕ ಪಡೆಯುವುದು ಕಾನೂನುಬಾಹಿರ. ಈ ರೀತಿ ನೀರಿನ ಸಂಪರ್ಕ ಪಡೆದರೆ ಅಂತಹ ಮನೆ/ಕಟ್ಟಡ ಮಾಲಿಕರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಜಲಮಂಡಳಿ ಎಚ್ಚರಿಸಿದೆ.





Advertisement

# ಬೈಪಾಸ್: ನೀರಿನ ಸಂಪರ್ಕ ಕಾನೂನು ಬಾಹಿರ

**ಬೆಂಗಳೂರು:** ಮಾಪಕದ ಮೂಲಕ ನೀರು ಹರಿಯುವಿಕೆಯನ್ನು ತಪ್ಪಿಸಿ ಬೈಪಾಸ್ ಮೂಲಕ ನೀರಿನ ಸಂಪರ್ಕ ಪಡೆಯುವುದು ಕಾನೂನು ಬಾಹಿರ. ಈ ರೀತಿ ಸಂಪರ್ಕ ಪಡೆದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸೂಚಿಸಿದೆ. ಬುಧವಾರ ಪತ್ರಿಕಾ ಹೇಳಿಕೆ ನೀಡಿದ್ದು, ಮಾಪಕದ ಮೂಲಕ ನೀರು ಹರಿಯುವಿಕೆಯನ್ನು ತಪ್ಪಿಸಿ ಬೈಪಾಸ್ ಮೂಲಕ ಪಡೆದಿರುವ ನೀರಿನ ಸಂಪರ್ಕವನ್ನು ಕಡಿತಗೊಳಿಸಬೇಕು. ಇದನ್ನು ಪತ್ತೆ ಹಚ್ಚಲು ಈಗಾಗಲೇ ತಂಡವೊಂದನ್ನು ರಚಿಸಲಾಗಿದೆ. ಇತ್ತೀಚೆಗೆ ಪೂರ್ವ ವಲಯದಲ್ಲಿ 41, ಪಶ್ಚಿಮ ವಲಯದಲ್ಲಿ 50 ಸೇರಿದಂತೆ 91 ಸಂಪರ್ಕಗಳನ್ನು ಗುರುತಿಸಲಾಗಿದೆ. ಅಲ್ಲದೆ, ಸಂಪರ್ಕ ಕಡಿತಗೊಳಿಸಿ ಸಂಬಂಧಪಟ್ಟವರಿಗೆ ದಂಡ ವಿಧಿಸಲಾಗಿದೆ. ಗ್ರಾಹಕರು ಮುಂದೆ ಈ ರೀತಿಯ ಘಟನೆಗಳು ಮರುಕಳಿಸಲು ಅವಕಾಶ ನೀಡಬಾರದು ಎಂದು ತಿಳಿಸಿದೆ.